ಮೈಸೂರು ಜಿಲ್ಲೆಯಲ್ಲಿ ಕರಕುಶಲ ಕರ್ಮಿಗಳಿಗೆ ಶ್ರೀಗಂಧವನ್ನು ನೀಡುವ ಬಗ್ಗೆ

3137 (3624) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಲೈಸೆನ್ಸ್ ಹೊಂದಿರುವ ಕರಕುಶಲ ಕರ್ಮಿಗಳ ಸಂಖ್ಯೆ ಎಷ್ಟು;

ಆ) ಅವರುಗಳಲ್ಲಿ ಮೈಸೂರು ಜಿಲ್ಲೆಯ ಕರಕುಶಲ ಕರ್ಮಿಗಳ ಸಂಖ್ಯೆ ಎಷ್ಟು; ಅವರುಗಳಲ್ಲಿ ಮೆಷಿನ್‌ಸಹಿತ, ಮೆಷಿನ್‌ರಹಿತ ಎಷ್ಟೆಷ್ಟು;

ಇ) ಇವರುಗಳಿಗೆ ಪ್ರತಿ ತಿಂಗಳು ಶ್ರೀಗಂಧವನ್ನು ಎಷ್ಟೆಷ್ಟು ಕಿಲೋಗ್ರಾಮ ನೀಡಲಾಗುತ್ತಿದೆ;

ಈ) ಈಗ ಇವರುಗಳಿಗೆ ಶ್ರೀಗಂಧವನ್ನು ನೀಡಲಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು; ಇದರಿಂದಾಗಿ ಇವರುಗಳ ಜೀವನ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವಿಚಾರದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ನೊಂದಾಯಿಸಿರುವ ಶ್ರೀಗಂಧ ಕುಶಲಕರ್ಮಿಗಳ ಸಂಖ್ಯೆ: 959

ಆ) ಮೈಸೂರು ಜಿಲ್ಲೆಯಲ್ಲಿ ನೋಂದಾಯಿಸಿರುವ ಶ್ರೀಗಂಧದ ಕುಶಲ ಕರ್ಮಿಗಳ ಸಂಖ್ಯೆ:114, ಮೆಷಿನ್ ಸಹಿತ (ಟರ್ನರ್) ಕುಶಲಕರ್ಮಿಗಳು–27, ಮೆಷಿನ್‌ರಹಿತ (ಕಾರ್ವರ್) ಕುಶಲಕರ್ಮಿಗಳು:87.

ಇ) 2002–03ನೇ ಸಾಲಿಗೆ ರಾಜ್ಯದಲ್ಲಿನ ನೋಂದಾಯಿತ ಕುಶಲಕರ್ಮಿಗಳಿಗೆ 10 ಟನ್ ಪ್ರಮಾಣದ ಶ್ರೀಗಂಧ ನೀಡಲಾಗಿದ್ದು, ಅವರಲ್ಲಿ ಮೈಸೂರು ಜಿಲ್ಲೆಯಲ್ಲಿ ಮೆಷಿನ್ ಸಹಿತ ಕುಶಲಕರ್ಮಿಗಳಿಗೆ ತಲಾ 12.00 ಕೆ.ಜಿ ಹಾಗೂ ಮೆಷಿನ್ ರಹಿತ ಕುಶಲಕರ್ಮಿಗಳಿಗೆ ತಲಾ 6.00 ಕೆ.ಜಿ ಶ್ರೀಗಂಧ ನೀಡಲಾಗಿದೆ.

ಈ) ಪ್ರತಿ ವರ್ಷ ಶ್ರೀಗಂಧದ ಕುಶಲಕರ್ಮಿಗಳಿಗೆ 100 ಟನ್ ಶ್ರೀಗಂಧದ (ಜಾಜ್ ಮೋಕಲ್ ಹಾಗೂ ಘಟಬದಲ ಗುಣಮಟ್ಟದ) ಅವಶ್ಯಕತೆಯಿರುತ್ತದೆ. ಪ್ರತಿ ವರ್ಷವೂ ಈ ಪ್ರಮಾಣದಲ್ಲಿ ಅರಣ್ಯ ಇಲಾಖೆಯನ್ನು ಶ್ರೀಗಂಧ ಬಿಡುಗಡೆ ಮಾಡಲು ಕೋರಲಾಗುತ್ತಿದೆ. ಆದರೆ ಅವರಿಂದ ಬೇಡಿಕೆಯಿರುವ ಪ್ರಮಾಣದಲ್ಲಿ ಶ್ರೀಗಂಧವು ಬಿಡುಗಡೆ ಮಾಡಲು ಆಗದಿರುವ ಕಾರಣ ಕುಶಲಕರ್ಮಿಗಳಿಗೆ ನಿಗದಿತ ಪ್ರಮಾಣದಲ್ಲಿ ನೀಡಲು ನಿಗಮಕ್ಕೆ ಸಾಧ್ಯವಾಗಿರುವುದಿಲ್ಲ. ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವ ಶ್ರೀಗಂಧ (Forest offence cases) ನ್ಯಾಯಾಲಯದ ಒಪ್ಪಿಗೆ ಪಡೆದು ನಿಗಮಕ್ಕೆ ಒದಗಿಸಲು ಕೋರಲಾಗಿದೆ. ಅದಲ್ಲದೆ ಶ್ರೀಗಂಧದ ಕೊರತೆ ನೀಗಿಸಲು ಶ್ರೀಗಂಧವನ್ನು ತಮಿಳುನಾಡಿನಿಂದ ಖರೀದಿಸಲು ಪ್ರಯತ್ನಿಸಲಾಗುತ್ತಿದೆ. ಅಲ್ಲದೆ, ಶಿವನಿ ಮರದಿಂದ ಸಂಬಂಧಪಟ್ಟ ವಸ್ತುಗಳನ್ನು ತಯಾರಿಸಲು ಕುಶಲಕರ್ಮಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಾಲ ವಿತರಣೆ

3138 (3437) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?